## ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 950(996) |
| ಸದಸ್ಯರ ಹೆಸರು : | ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ : | 21-09-2021 |
| ಉತ್ತರಿಸುವವರು : | ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಪೌರಾಡಳಿತ ಸಂಸ್ಥೆಗಳಲ್ಲಿರುವ ವಿವಿಧ ತಂತ್ರಾಂಶಗಳು ಯಾವುವು; ಅವುಗಳನ್ನು ನಿರ್ಮಿಸಿದ ಮತ್ತು ನಿರ್ವಹಿಸುತ್ತಿರುವ ಸಂಸ್ಥೆಗಳು ಯಾವುವು; ಈ ತಂತ್ರಾಂಶ ನಿರ್ವಹಣೆಗೆ ಕಳೆದ ಮೂರು ವರ್ಷಗಳಲ್ಲಿ ಪಾವತಿಸಲಾದ ಮೊತ್ತವೆಷ್ಟು; ಯಾವ ಯಾವ ಉದ್ದೇಶಗಳಿಗೆ ಈ ತಂತ್ರಾಂಶಗಳನ್ನು ಬಳಸಲಾಗುತ್ತಿದೆ; (ತಂತ್ರಾಂಶವಾರು, ವರ್ಷವಾರು ಮಾಹಿತಿ ನೀಡುವುದು) | ಪೌರಾಡಳಿತ ನಿರ್ದೇಶನಾಲಯವು ತನ್ನ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಮುನಿಸಿಪಲ್ ಡೇಟಾ ಸೊಸೈಟಿಯ ಮೂಲಕ ನಗರ ಸ್ಥಳೀಯ ಸಂಸ್ಥೆಗಳ ಬಳಕೆಗೆ ಅನುವಾಗುವಂತೆ ಹಲವಾರು ಸಾರ್ವಜನಿಕ ಸ್ನೇಹಿ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿದ್ದು, ಅನುಬಂಧ-1 ರಲ್ಲಿ ತಂತ್ರಾಂಶವಾರು ಮಾಹಿತಿಯನ್ನು ನೀಡಲಾಗಿದೆ.<br>ತಂತ್ರಾಂಶಗಳ ನಿರ್ವಹಣೆಗೆ ಕಳೆದ ಮೂರು ವರ್ಷಗಳಲ್ಲಿ ಪಾವತಿಸಲಾದ ಮೊತ್ತವನ್ನು ಈ ಕೆಳಗೆ ನೀಡಲಾಗಿದೆ. |

| ವರ್ಷ | ತಂತ್ರಾಂಶ | ಖರ್ಚಿನ ಬಾಬ್ತು (ರೂಗಳಲ್ಲಿ) |
|---|---|---|
| 2018-19 | ಕೆಎಂಡಿಎಸ್ ವತಿಯಿಂದ ನಿರ್ವಹಿಸುತ್ತಿರುವ ತಂತ್ರಾಂಶಗಳು | 8,53,74,984/- |
| 2019-20 | ಕೆಎಂಡಿಎಸ್ ವತಿಯಿಂದ ನಿರ್ವಹಿಸುತ್ತಿರುವ ತಂತ್ರಾಂಶಗಳು | 11,10,71,867/- |
| 2020-21 | ಎನ್.ಐ.ಸಿ ವತಿಯಿಂದ ನಿರ್ವಹಿಸುತ್ತಿರುವ ಇ-ಆಸ್ತಿ | 19,40,000/- |
| | ಕೆಎಂಡಿಎಸ್ ವತಿಯಿಂದ ನಿರ್ವಹಿಸುತ್ತಿರುವ ತಂತ್ರಾಂಶಗಳು | 12,92,74,868/- |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಆ. | ಪ್ರಸ್ತುತ ಇಲಾಖೆಯಿಂದ ಬಳಸದೇ ಇರುವ ತಂತ್ರಾಂಶಗಳು ಯಾವುವು; ಯಾವ ಉದ್ದೇಶಗಳಿಗಾಗಿ ಈ | ಕೆ.ಎಂ.ಡಿ.ಎಸ್ ವತಿಯಿಂದ ಅಭಿವೃದ್ಧಿಪಡಿಸಿದ ತಂತ್ರಾಂಶಗಳಾದ<br>• **4ನೇ ಹಣಕಾಸು ಆಯೋಗದ ಮಾಹಿತಿಗೆ** ಬೇಕಾದ ಅಂಕಿ ಅಂಶಗಳನ್ನು ಸಂಗ್ರಹಿಸಲು ಅಭಿವೃದ್ಧಿಗೊಳಿಸಿದ್ದು, ಮಾಹಿತಿ ಪಡೆದ ನಂತರ ಸ್ಥಗಿತಗೊಳಿಸಲಾಗಿದೆ. |

| | | |
|---|---|---|
| | ತಂತ್ರಾಂಶವನ್ನು ಬಳಸಲಾಗುತ್ತಿತ್ತು; ಈಗ ಈ ತಂತ್ರಾಂಶವನ್ನು ಬಳಸದೇಯಿರಲು ಕಾರಣವೇನು; ಈ ತಂತ್ರಾಂಶಗಳನ್ನುಯ ಯಾವ ಸಂಸ್ಥೆಗಳಿಂದ ಅಭಿವೃದ್ಧಿಪಡಿಸಲಾಗಿದೆ; ಇವುಗಳಿಗೆ ಮಾಡಲಾದ ವೆಚ್ಚವೆಷ್ಟು; | • **ಅಮೃತ್‌ಯೋಜನೆಗೆ ಸಂಬಂಧಪಟ್ಟ ತಂತ್ರಾಂಶಕ್ಕೆ ಕೇಂದ್ರ ಸರ್ಕಾರವು** ಪರ್ಯಾಯ ವ್ಯವಸ್ಥೆ ಮುಖಾಂತರ ನಿರ್ವಹಿಸುತ್ತಿರುವುದರಿಂದ ಸ್ಥಗಿತಗೊಳಿಸಲಾಗಿದೆ.<br>• **ಆಸ್ತಿಗಳ ಸರ್ವೆಗೆ ಅಭಿವೃದ್ಧಿ ಪಡಿಸಲಾದ ಮೊಬೈಲ್ ತಂತ್ರಾಂಶಕ್ಕೆ** ಪರ್ಯಾಯವಾಗಿ ಇ-ಆಸ್ತಿ ತಂತ್ರಾಂಶವನ್ನು ಅನುಷ್ಠಾನಗೊಳಿಸಿದ್ದರಿಂದ ಸ್ಥಗಿತಗೊಳಿಸಲಾಗಿದೆ.<br>• **ಅಧಿಕಾರಿ / ಸಿಬ್ಬಂದಿಗಳು ಬೇರೆ ಇಲಾಖೆಯ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಲು ಅಭಿವೃದ್ಧಿಪಡಿಸಲಾದ ತಂತ್ರಾಂಶ ಮತ್ತು ಸಿಬ್ಬಂದಿ ಮಾಹಿತಿ ವ್ಯವಸ್ಥೆ ತಂತ್ರಾಂಶಗಳನ್ನು** ಹೆಚ್‌ಆರ್.ಎಂ.ಎಸ್ ತಂತ್ರಾಂಶದ ಅನುಷ್ಠಾನದಿಂದಾಗಿ ಸ್ಥಗಿತಗೊಳಿಸಲಾಗಿದೆ.<br>ಇವೆಲ್ಲಾ ತಂತ್ರಾಂಶಗಳು ಕೆ.ಎಂ.ಡಿ.ಎಸ್ ವತಿಯಿಂದ ಅಭಿವೃದ್ಧಿಪಡಿಸಿದ್ದು, ಕೆ.ಎಂ.ಡಿ.ಎಸ್ ನಿರ್ವಹಣಾ ವೆಚ್ಚದಲ್ಲಿ ಸೇರಿದೆ. |
| ಇ. | ತಂತ್ರಾಂಶಗಳಿಂದ ಇಲಾಖೆಯ ಕೆಲಸ ಕಾರ್ಯಗಳು ಜನಸ್ನೇಹಿಯಾಗುತ್ತಿರುವುದರ ಬದಲಿಗೆ ಜಟಿಲವಾಗುತ್ತಿರುವುದು ನಿಜವೇ; ಸರ್ವರ್ ಸಮಸ್ಯೆ ತಂತ್ರಾಂಶದ ಸಮಸ್ಯೆಗಳಿಂದ ಜನರಿಗೆ ಸಮಸ್ಯೆಯಾಗುತ್ತಿದ್ದು, ಈ ಬಗ್ಗೆ ನಿರ್ವಹಣಾ ಸಂಸ್ಥೆಗಳ ವಿರುದ್ಧ ಕ್ರಮವಹಿಸಲಾಗಿದೆಯೇ; ಕೈಗೊಂಡ ಕ್ರಮದ ಮಾಹಿತಿಯನ್ನು ನೀಡುವುದು; ಈ ತಂತ್ರಾಂಶಗಳ ಮೇಲುಸ್ತುವಾರಿಗಳಿಗೆ ಇಲಾಖೆಯಿಂದ ಅಧಿಕಾರಿಗಳನ್ನು ನಿಯೋಜಿಸಲಾಗಿದೆಯೇ; (ಸಂಪೂರ್ಣ ಮಾಹಿತಿಯನ್ನು ನೀಡುವುದು) | ನಗರ ಸ್ಥಳೀಯ ಸಂಸ್ಥೆಗಳು ನಿರ್ಮಾಣ-2 ತಂತ್ರಾಂಶದ ಮೂಲಕ ಕಟ್ಟಡ ಪರವಾನಿಗೆಯನ್ನು ನಿರ್ವಹಣೆ ಮಾಡುತ್ತಿವೆ. ಸದರಿ ತಂತ್ರಾಂಶವನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ವತಿಯಿಂದ ಟೆಂಡರ್ ಆಹ್ವಾನಿಸಿ, ಐ.ಡಿ.ಎಸ್.ಐ ಇಂಡಿಯ ಪ್ರೈ. ಲಿ.ರವರಿಗೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ನಿರ್ವಹಿಸಲು ಕಾರ್ಯಾದೇಶ ನೀಡಲಾಗಿರುತ್ತದೆ.<br>ನಿರ್ಮಾಣ-2 ತಂತ್ರಾಂಶದಲ್ಲಿ ಕೆಲವೊಂದು ತಾಂತ್ರಿಕ ನ್ಯೂನ್ಯತೆಗಳಿದ್ದು, ಸದರಿ ಕಂಪನಿಯು ನಗರ ಸ್ಥಳೀಯ ಸಂಸ್ಥೆಗಳು ದೂರುಗಳನ್ನು ದಾಖಲಿಸಲು ಅನುವಾಗುವಂತೆ ಆನ್‌ಲೈನ್ ಪೋರ್ಟಲ್ ನಲ್ಲಿ ಅವಕಾಶ ಕಲ್ಪಿಸಿರುತ್ತದೆ ಹಾಗೂ ದೂರವಾಣಿಯ ಮೂಲಕ ಸಹಾಯವಾಣಿಗೆ ಕರೆ ಮಾಡಿ ದೂರುಗಳನ್ನು ಪರಿಹರಿಸಿಕೊಳ್ಳಲು ಅವಕಾಶ ಕಲ್ಪಿಸಿರುತ್ತದೆ.<br>ತಂತ್ರಾಂಶದಲ್ಲಿನ ತಾಂತ್ರಿಕ ನ್ಯೂನ್ಯತೆಗಳಿಗೆ ಶಾಶ್ವತ ಪರಿಹಾರ ನೀಡಲು ಐ.ಡಿ.ಎಸ್.ಐ ಸಂಸ್ಥೆಗೆ ಸೂಚಿಸುವಂತೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಪತ್ರಗಳನ್ನು ಬರೆಯಲಾಗಿರುತ್ತದೆ ಹಾಗೂ ಹಲವಾರು ಸಭೆಗಳ ಮೂಲಕ ಸರ್ಕಾರವು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಮತ್ತು ಪೌರಾಡಳಿತ ನಿರ್ದೇಶನಾಲಯವು ಹಲವಾರು ಸಭೆಗಳ ಮೂಲಕ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಲು ಐ.ಡಿ.ಎಸ್.ಐ ಸಂಸ್ಥೆಗೆ ಸೂಚಿಸಲಾಗಿರುತ್ತದೆ.<br>ನಿರ್ಮಾಣ-2 ತಂತ್ರಾಂಶವನ್ನು ಹೊರತುಪಡಿಸಿ ಉಳಿದ ತಂತ್ರಾಂಶಗಳಲ್ಲಿ ಯಾವುದೇ ಪ್ರಮುಖವಾದ ಸಮಸ್ಯೆಗಳು ಇರುವುದಿಲ್ಲ, ಅಂತರ್ಜಾಲ ವ್ಯವಸ್ಥೆಯಲ್ಲಿ ವ್ಯತ್ಯಯವಿದ್ದಾಗ ಕೆಲವೊಮ್ಮೆ ತಂತ್ರಾಂಶಗಳಲ್ಲಿ ತೊಂದರೆಉಂಟಾಗುತ್ತದೆ.<br>ತಂತ್ರಾಂಶಗಳ ನಿರ್ವಹಣೆಗೆ ಸಂಬಂಧಪಟ್ಟಂತೆ ಪೌರಾಡಳಿತ ನಿರ್ದೇಶನಾಲಯದಡಿ ತಂತ್ರಾಂಶಗಳ ನಿರ್ವಹಣೆಗೆ ಕರ್ನಾಟಕ ಮುನಿಸಿಪಲ್ ಡೇಟಾ ಸೊಸೈಟಿಯು ಕಾರ್ಯ ನಿರ್ವಹಿಸುತ್ತಿದ್ದು, ಸದರಿ |

| | | |
|---|---|---|
| | | ಸಂಸ್ಥೆಗೆ ಜಂಟಿ ನಿರ್ದೇಶಕರು (ಸುಧಾರಣೆ) ಇವರ ಮೇಲ್ವಿಚಾರಣೆಯಲ್ಲಿ ಉಪ ನಿರ್ದೇಶಕರು, ಲೆಕ್ಕಾಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು ಮತ್ತು ತಾಂತ್ರಿಕ ಸಿಬ್ಬಂದಿಗಳು (ಸಾಫ್ಟ್‌ವೇರ್ ಡೆವಲಪರ್ಸ್ ಮತ್ತು ಬಿಸಿನೆಸ್ ಅನಾಲಿಸ್ಟ್ ಗಳು ಕನ್ಸಲ್ಟೆನ್ಸಿ ಗುತ್ತಿಗೆ ಆಧಾರದಲ್ಲಿ) ಸೊಸೈಟಿಯಲ್ಲಿಕಾರ್ಯ ನಿರ್ವಹಿಸುತ್ತಿರುತ್ತಾರೆ. |

**ಸಂಖ್ಯೆ: ನಅಇ 211 ಜಿಇಎಲ್ 2021(ಇ)**

(ಎನ್.ನಾಗರಾಜ್ ಎಂಟಿಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳ ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಅನುಬಂಧ-I

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲಾಗಿರುವ ತಂತ್ರಾಂಶಗಳ ವಿವರ

| ತಂತ್ರಾಂಶ | ನಿರ್ವಹಿಸುತ್ತಿರುವ ಸಂಸ್ಥೆ | ಉದ್ದೇಶ |
|---|---|---|
| ಇ-ಸ್ವೀಕೃತಿ | ಕೆ.ಎಂ.ಡಿ.ಎಸ್ | ಇ-ಸ್ವೀಕೃತಿ ತಂತ್ರಾಂಶವು ನಗರ ಸ್ಥಳೀಯ ಸಂಸ್ಥೆಗಳ ಆದಾಯದ ಕೇಂದ್ರೀಕೃತ ಸಂಗ್ರಹಣೆಯಾಗಿದ್ದು, ಆನ್‌ಲೈನ್ ಅಥವಾ ಆಫ್‌ಲೈನ್ ಪಾವತಿಗಾಗಿ ಚಲನ್‌ಗಳ ಉತ್ಪಾದನೆಯ ಮೂಲಕ ಪಾವತಿಸಿದಂತೆ ಅಪ್‌ಡೇಟ್ ಮಾಡಿದ ಚಲನ್‌ಗಳನ್ನು ಎಫ್‌ಬಿಎಎಸ್‌ನೊಂದಿಗೆ ಇಂಟಿಗ್ರೇಷನ್ ಮೂಲಕ ಲೆಕ್ಕಪತ್ರಕ್ಕಾಗಿ ಆಯಾ ಖಾತೆಗಳಿಗೆ ಪೋಸ್ಟ್ ಮಾಡಲಾಗುತ್ತದೆ |
| ವ್ಯಾಪಾರ | ಕೆ.ಎಂ.ಡಿ.ಎಸ್ | ಈ ತಂತ್ರಾಂಶವು ನಾಗರಿಕರಿಗೆ ಹೊಸ ವ್ಯಾಪಾರ ಪರವಾನಿಗೆ ಮತ್ತು ಚಾಲ್ತಿಯಲ್ಲಿರುವ ವ್ಯಾಪಾರ ಪರವಾನಿಗೆ ನವೀಕರಿಸಲು ಸಹಾಯ ಮಾಡುತ್ತದೆ. ಡಿಜಿಟಲ್ ಸಹಿವುಳ್ಳ ವ್ಯಾಪಾರ ಪರವಾನಿಗೆ ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಲು ನಾಗರಿಕರಿಗೆ ಸೌಲಭ್ಯ ಕಲ್ಪಿಸಿಕೊಡಲಾಗಿದೆ |
| ಮೊಬೈಲ್ ಟವರ್ ಅನುಮತಿ | ಕೆ.ಎಂ.ಡಿ.ಎಸ್ | ಈ ತಂತ್ರಾಂಶದ ಮೂಲಕ ಮೊಬೈಲ್ ಟವರ್ ನಿರ್ಮಾಣ ಮಾಡಲು ಅನುಮತಿಗಾಗಿ ಅರ್ಜಿ ಸಲ್ಲಿಸಬಹುದಾಗಿದ್ದು, ಡಿಜಿಟಲ್ ಸಹಿವುಳ್ಳ ಅನುಮತಿ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶಕಲ್ಪಿಸಲಾಗಿದೆ. |
| ನಿಧಿ ಆಧಾರಿತ ಲೆಕ್ಕ ಪದ್ಧತಿ (FBAS) | ಕೆ.ಎಂ.ಡಿ.ಎಸ್ | ಈ ತಂತ್ರಾಂಶದಡಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನನಿತ್ಯದ ಹಣಕಾಸು ಚಟುವಟಿಕೆಗಳನ್ನು ಗಣಕೀಕೃತಗೊಳಿಸಲಾಗಿದೆ. ಈ ತಂತ್ರಾಂಶವು ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಸ್ಥಿತಿಯನ್ನು ನಿರ್ದಿಷ್ಟ ಸಮಯದಲ್ಲಿ ತಿಳಿಯಲು ಸಹಾಯ ಮಾಡುತ್ತದೆ ಮತ್ತು ಈ ಮೂಲಕ ಹಣಕಾಸು ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಹೆಚ್ಚಿಸುತ್ತದೆ. |
| ಘನತ್ಯಾಜ್ಯ ನಿರ್ವಹಣೆ-ಸೇವಾ ಶುಲ್ಕಗಳು | ಕೆ.ಎಂ.ಡಿ.ಎಸ್ | ಘನತ್ಯಾಜ್ಯ ನಿರ್ವಹಣೆ ಸೇವೆಯ ಬಳಕೆದಾರರ ಶುಲ್ಕವನ್ನು ಲೆಕ್ಕಾಚಾರ ಮಾಡಲು ಈ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ. ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕಗಳನ್ನು ಪಾವತಿಸಬೇಕಾದ ಮೊತ್ತವನ್ನು ಲೆಕ್ಕಿಸಿ ಆನ್‌ಲೈನ್‌ನಲ್ಲಿ ಪಾವತಿಸಲು ಅಭಿವೃದ್ಧಿಪಡಿಸಲಾಗಿದೆ. |
| ಆಸ್ತಿ ನಿರ್ವಹಣೆ | ಕೆ.ಎಂ.ಡಿ.ಎಸ್ | ULB ಗಳ ಚರ ಮತ್ತು ಸ್ಥಿರ ಆಸ್ತಿಗಳ ವಿವರಗಳನ್ನು ಗಣಕೀಕರಣಗೊಳಿಸಲಾಗಿದೆ. ನಗರ ಸ್ಥಳೀಯ ಸಂಸ್ಥೆಯ ಮಾಲೀಕತ್ವದ ಆಸ್ತಿಗಳ ಮಾಹಿತಿಯನ್ನು ಈ ತಂತ್ರಾಂಶದಲ್ಲಿ ಪಡೆಯಬಹುದು. |
| ಜನಹಿತ | ಕೆ.ಎಂ.ಡಿ.ಎಸ್ | ನಾಗರಿಕರು ತಮ್ಮ ದೂರುಗಳನ್ನು ಆನ್ ಲೈನ್ ಮೂಲಕ ನೋಂದಾಯಿಸಿಕೊಳ್ಳಬಹುದು ಮತ್ತು ನಾಗರಿಕರು ದೂರಿನ ಸ್ಥಿತಿಯನ್ನು ಈ ತಂತ್ರಾಂಶದಲ್ಲಿ ಪರಿಶೀಲಿಸಬಹುದು. |
| ಜಾಹೀರಾತು ಫಲಕಗಳ ಪರವಾನಿಗೆ | ಕೆ.ಎಂ.ಡಿ.ಎಸ್ | ಈ ತಂತ್ರಾಂಶದ ಮೂಲಕ ಜಾಹೀರಾತು ಅಳವಡಿಸಲು ಅನುಮತಿಗೆ ಅರ್ಜಿ ಸಲ್ಲಿಸಿ, ಡಿಜಿಟಲ್ ಸಹಿವುಳ್ಳ ಅನುಮತಿ ಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ನಾಗರಿಕರಿಗೆ ಸೌಲಭ್ಯ ಕಲ್ಪಿಸಿಕೊಡಲಾಗಿದೆ |
| ಚಲನಚಿತ್ರ ಚಿತ್ರೀಕರಣ | ಕೆ.ಎಂ.ಡಿ.ಎಸ್ | ಈ ತಂತ್ರಾಂಶದ ಮೂಲಕ ಚಲನಚಿತ್ರ ಚಿತ್ರೀಕರಣಕ್ಕೆ ನಿರಾಕ್ಷೇಪಣಾ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸಿ, ಡಿಜಿಟಲ್ ಸಹಿವುಳ್ಳ ಚಲನಚಿತ್ರ ಚಿತ್ರೀಕರಣ ನಿರಾಕ್ಷೇಪಣಾ ಪತ್ರವನ್ನು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಲು ನಾಗರಿಕರಿಗೆ ಸೌಲಭ್ಯ ಕಲ್ಪಿಸಿಕೊಡಲಾಗಿದೆ |
| ನ್ಯಾಯಾಲಯ ಪ್ರಕರಣ ಉಸ್ತುವಾರಿ ವ್ಯವಸ್ಥೆ | ಕೆ.ಎಂ.ಡಿ.ಎಸ್ | ಈ ತಂತ್ರಾಂಶವು ನಗರ ಸ್ಥಳೀಯ ಸಂಸ್ಥೆ ಮತ್ತು ಜಿಲ್ಲಾ ನಗರಾಭಿವೃದ್ಧಿ ಕೋಶಗಳ ನ್ಯಾಯಾಲಯದ ಪ್ರಕರಣಗಳ ಸ್ಥಿತಿಯ ವಿವರಗಳನ್ನು ದಾಖಲಿಸಲು ಹಾಗೂ ಒಟ್ಟಾರೆ ನ್ಯಾಯಾಲಯ ಪ್ರಕರಣಗಳ ಮಾಹಿತಿಯನ್ನು ಪಡೆಯಲು ಬಳಸಲಾಗುತ್ತಿದೆ. |
| ಕರ್ನಾಟಕ ಸೇವಾ | ಕೆ.ಎಂ.ಡಿ.ಎಸ್ | ನಗರ ಸ್ಥಳೀಯ ಸಂಸ್ಥೆಗಳ ಸೇವಾ ಮಟ್ಟದ ಮಾನದಂಡಗಳನ್ನು |

Scanned by CamScanner

| | | |
|---|---|---|
| ಮಟ್ಟದ ಮಾನದಂಡ | | ವಾರ್ಷಿಕ ಮತ್ತು ತ್ರೈಮಾಸಿಕ ಪ್ರಗತಿಯನ್ನು ನಿಗದಿಪಡಿಸುವ ಸಲುವಾಗಿ ವಾರ್ಷಿಕ ಮತ್ತು ತ್ರೈಮಾಸಿಕ ಪ್ರಗತಿಯನ್ನು ನಿಗದಿಪಡಿಸುವ ಸಲುವಾಗಿ ಈ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ. ಸದರಿ ತಂತ್ರಾಂಶವು ಪ್ರತಿ ಸೇವೆಗೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಮೇಲ್ವಿಚಾರಣೆ ಮಾಡುವ ಸಾಧನವನ್ನು ಒದಗಿಸುತ್ತದೆ (ನೀರು ಸರಬರಾಜು, ತ್ಯಾಜ್ಯ ನೀರು ನಿರ್ವಹಣೆ, ಘನ ತ್ಯಾಜ್ಯ ನಿರ್ವಹಣೆ, ರಸ್ತೆಗಳು, ಚರಂಡಿಗಳು ಮತ್ತು ಬೀದಿ ದೀಪಗಳು, ಉದ್ಯಾನವನಗಳು ಮತ್ತು ಉದ್ಯಾನಗಳ ಅಭಿವೃದ್ಧಿ, ರೋಗ ನಿಯಂತ್ರಣ ಮತ್ತು ಹಣಕಾಸು) ಮತ್ತು ನಗರ ಸ್ಥಳೀಯ ಸಂಸ್ಥೆಯ ಕಾರ್ಯಕ್ಷಮತೆಯ ಮಟ್ಟವನ್ನು ಮೌಲ್ಯಮಾಪನ ಮಾಡಲು ಸಹಾಯವಾಗುತ್ತದೆ. |
| ನಗರ ಸ್ಥಳೀಯ ಸಂಸ್ಥೆಗಳ ಯೋಜನೆಗಳು | ಕೆ.ಎಂ.ಡಿ.ಎಸ್ | ನಗರ ಸ್ಥಳೀಯ ಸಂಸ್ಥೆಗಳ ವಿವಿಧ ಯೋಜನೆಗಳ ಹಂಚಿಕೆ, ಬಿಡುಗಡೆಗಳು, ಕಾಮಗಾರಿ/ಕಾರ್ಯಕ್ರಮಗಳ ಸ್ಥಿತಿ, ವೆಚ್ಚ ಮತ್ತು ಸಂಬಂಧಿಸಿದ ಇನ್ನಿತರೆ ವಿವರಗಳನ್ನು ವೆಬ್ ಆಧಾರಿತ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಯೋಜನೆಗಳ ಅನುಷ್ಠಾನವನ್ನು ಹಾಗೂ ಪ್ರಗತಿಯನ್ನು ಈ ತಂತ್ರಾಂಶವನ್ನು ಬಳಸಿ ಮೇಲ್ವಿಚಾರಣೆ ಮಾಡಲಾಗುತ್ತಿದೆ. ಸದರಿ ತಂತ್ರಾಂಶವನ್ನು ನಿಧಿ ಆಧಾರಿತ ಲೆಕ್ಕಪದ್ಧತಿ ಮತ್ತು ಇ-ಪ್ರಾಕ್ಯೂರ್‌ಮೆಂಟ್ ಪೋರ್ಟಲ್‌ನೊಂದಿಗೆ ಇಂಟಿಗ್ರೇಟ್ ಮಾಡಿ ಹೆಚ್ಚಿನ ಪಾರದರ್ಶಕತೆಯನ್ನು ತರಲಾಗಿದೆ. |
| ಬೀದಿ ವ್ಯಾಪಾರ ತಂತ್ರಾಂಶ | ಕೆ.ಎಂ.ಡಿ.ಎಸ್ | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬೀದಿ ವ್ಯಾಪಾರಿಗಳ ವಿವರಗಳನ್ನು ಸದರಿ ತಂತ್ರಾಂಶದಲ್ಲಿ ದಾಖಲಿಸಲಾಗಿದೆ. |
| ನಗರ ಸ್ಥಳೀಯ ಸಂಸ್ಥೆಗಳ ಖಾಲಿ/ಭರ್ತಿ ಹುದ್ದೆಯ ಮಾಹಿತಿ (Official Vacancy Postion) | ಕೆ.ಎಂ.ಡಿ.ಎಸ್ | ನಗರ ಸ್ಥಳೀಯ ಸಂಸ್ಥೆಗಳ ಖಾಲಿ ಇರುವ ಹಾಗೂ ಭರ್ತಿಯಾಗಿರುವ ಹುದ್ದೆಗಳ ಮಾಹಿತಿಯನ್ನು ಈ ತಂತ್ರಾಂಶದಲ್ಲಿ ನಿರ್ವಹಿಸಲಾಗುತ್ತಿದೆ. |
| ಜಲನಿಧಿ | ಕೆ.ಎಂ.ಡಿ.ಎಸ್ | ಜಲನಿಧಿ ತಂತ್ರಾಂಶವನ್ನು ಬಳಸಿಕೊಂಡು ನಾಗರಿಕರು ತಮ್ಮ ಮನೆ/ಉದ್ಯಮಕ್ಕಾಗಿ ಹೊಸ ನೀರಿನ ಟ್ಯಾಪ್ ಸಂಪರ್ಕ ಮತ್ತು ಭೂಗತ ಒಳಚರಂಡಿ ವ್ಯವಸ್ಥೆಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ನಾಗರಿಕರು ತಂತ್ರಾಂಶದಲ್ಲಿನ ಪ್ರಸ್ತುತ ಸ್ಥಿತಿಯನ್ನು ಟ್ರ್ಯಾಕ್ ಮಾಡಬಹುದು ಮತ್ತು ನೀರು/ಯುಜಿಡಿ ಸಂಪರ್ಕ ಪ್ರಮಾಣಪತ್ರವನ್ನು ಡೌನ್‌ಲೋಡ್ ಮಾಡಬಹುದು |
| ಆಸ್ತಿ ತೆರಿಗೆ ಲೆಕ್ಕಚಾರ | ಕೆ.ಎಂ.ಡಿ.ಎಸ್ | ನಾಗರಿಕರು ತಂತ್ರಾಂಶದ ಮೂಲಕ ತಮ್ಮ ಆಸ್ತಿಯ ವಿವರಗಳನ್ನು ದಾಖಲಿಸಿ ಆಸ್ತಿ ತೆರಿಗೆಯನ್ನು ಲೆಕ್ಕಾಚಾರಮಾಡಿಕೊಳ್ಳಲು ಮತ್ತು ಆಸ್ತಿ ತೆರಿಗೆಯನ್ನು ಪಾವತಿಸಲು ಅವಕಾಶಕಲ್ಪಿಸಲಾಗಿದೆ. |
| ಸೌಕರ್ಯ ನಿರ್ವಹಣಾ ವ್ಯವಸ್ಥೆ (OFC/Gas Pipe line/Electricity) | ಕೆ.ಎಂ.ಡಿ.ಎಸ್ | OFC ಗೆ ಅರ್ಜಿ ಸಲ್ಲಿಸಲು ನೋಂದಾಯಿತ ಸೇವಾ ಪೂರೈಕೆದಾರರಿಗೆ ಈ ತಂತ್ರಾಂಶವು ಉಪಯುಕ್ತವಾಗುತ್ತದೆ. ನಾಗರೀಕರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ಆನ್‌ಲೈನ್‌ನಲ್ಲಿ ಅನುಮತಿ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. |
| ಕೋವಿಡ್ ನಿರಾಶಿತರ ವಸತಿ | ಕೆ.ಎಂ.ಡಿ.ಎಸ್ | ನಗರ ಸ್ಥಳೀಯ ಸಂಸ್ಥೆ ಮಟ್ಟದ ಆಶ್ರಯ ವಿವರಗಳು, ಆಹಾರ ಕಿಟ್ ವಿತರಣೆ ವಿವರಗಳು, ಬೂತ್ ಮಟ್ಟದ ಸಮಿತಿ (BLC) ಮತ್ತು ವಾರ್ಡ್ ಲೆವೆಲ್ ಟಾಸ್ಕ್ ಫೋರ್ಸ್ (WLTF), ಕೋವಿಡ್+ve ಮತ್ತು ಸಾವಿನ ಪ್ರಕರಣಗಳು, ಮನೆ ಬಾಗಿಲಿಗೆ ಆರೋಗ್ಯ ಸಮೀಕ್ಷೆ ಸೆರೆಹಿಡಿಯುವುದು. |
| ಶಾಪ್ ಲೀಸ್ | ಕೆ.ಎಂ.ಡಿ.ಎಸ್ | ಅಂಗಡಿಗಳು ಮತ್ತು ಖಾಲಿ ಭೂಮಿ ಸೇರಿದಂತೆ ನಗರ ಸ್ಥಳೀಯ ಸಂಸ್ಥೆ ಕಟ್ಟಡಗಳ ಗುತ್ತಿಗೆ ಅಥವಾ ಬಾಡಿಗೆ ವಿವರಗಳನ್ನು ಸೆರೆಹಿಡಿಯುವುದು. |

Scanned by CamScanner

| | | |
|---|---|---|
| ನಿರ್ಮಾಣ 2.0 | ಐ.ಡಿ.ಎಸ್.ಐ | ನಾಗರೀಕರು ಆನ್‌ಲೈನ್ ಮೂಲಕ ಕಟ್ಟಡ ಪರವಾನಿಗೆ ಅರ್ಜಿ ಸಲ್ಲಿಸಬಹುದಾಗಿದ್ದು, ನಗರ ಸ್ಥಳೀಯ ಸಂಸ್ಥೆಗಳು ತಂತ್ರಾಂಶದ ಮೂಲಕವೇ ಅರ್ಜಿಗಳನ್ನು ಪರಿಶೀಲಿಸಿ ಅನುಮೋದನೆ ನೀಡಬೇಕಿರುತ್ತದೆ. ತಂತ್ರಾಂಶವು ಕಟ್ಟಡದ ನಕ್ಷೆಯನ್ನು ಸ್ವಯಂಚಾಲಿತವಾಗಿ ವಲಯವಾರು ನಿಯಮಾವಳಿಯೊಂದಿಗೆ ಪರಿಶೀಲಿಸಿ ವರದಿಯನ್ನು ಸೃಜನೆ ಮಾಡುತ್ತದೆ. ನಾಗರೀಕರು ಆನ್‌ಲೈನ್ ಮೂಲಕ ಕಟ್ಟಡ ಪರವಾನಿಗೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. |
| ಇ-ಆಸ್ತಿ | ಎನ್.ಐ.ಸಿ | ಈ ತಂತ್ರಾಂಶದಲ್ಲಿ ಆಸ್ತಿಯ ವಿವರಗಳನ್ನು ದಾಖಲಿಸಬಹುದಾಗಿದ್ದು, ನಗರ ಸ್ಥಳೀಯ ಸಂಸ್ಥೆಗಳು ಹಂತ ಹಂತವಾಗಿ ಆಸ್ತಿಗಳನ್ನು ತಂತ್ರಾಂಶದಲ್ಲಿ ದಾಖಲಿಸುತ್ತಿವೆ. ಇ-ಆಸ್ತಿ ತಂತ್ರಾಂಶದಲ್ಲಿ ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ (ಮ್ಯುಟೇಷನ್) ಮಾಡಲು ಮತ್ತು ಡಿಜಿಟಲ್ ಸಹಿ ಮಾಡಿದ ನಮೂನೆ –3 ನ್ನು ಸೃಜಿಸಲು ಅವಕಾಶ ಕಲ್ಪಿಸಲಾಗಿದೆ. ನಾಗರೀಕರು ಡಿಜಿಟಲ್ ಸಹಿ ಮಾಡಿದ ನಮೂನೆ –3 ಅನ್ನು ಡೌನ್‌ಲೋಡ್ ಮಾಡಲು ಮತ್ತು ಆಸ್ತಿ ವಿವರಗಳನ್ನು ಆನ್‌ಲೈನ್‌ನಲ್ಲಿ ವೀಕ್ಷಿಸಲು ಅವಕಾಶಕಲ್ಪಿಸಿದೆ.<br><br>ಇ-ಆಸ್ತಿ ತಂತ್ರಾಂಶವನ್ನು ಕಾವೇರಿ ತಂತ್ರಾಂಶದೊಂದಿಗೆ ಸಂಯೋಜಿಸಲಾಗಿದ್ದು, ರಾಮನಗರ ಮತ್ತು ಕನಕಪುರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದೆ. ಈ ಜೋಡಣಾ ವ್ಯವಸ್ಥೆಯಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿರುವ ಕಾವೇರಿ ವ್ಯವಸ್ಥೆಯಲ್ಲಿ ಆಸ್ತಿಯನ್ನು ನೋಂದಾಯಿಸಿದ ನಂತರ ನಾಗರಿಕರು ಪ್ರತ್ಯೇಕವಾಗಿ ನಗರ ಸ್ಥಳೀಯ ಸಂಸ್ಥೆಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ. |
| ಆಸ್ತಿ ಹುಡುಕುವಿಕೆ | ಕೆ.ಎಂ.ಡಿ.ಎಸ್ | ಆಸ್ತಿ ಐಡಿ ಅಥವಾ ಆಸ್ತಿ ಮಾಲೀಕರ ಹೆಸರು ಅಥವಾ ಖಾತಾ ನಂಬರ್ ವಿವರಗಳನ್ನು ನೋಡಬಹುದು. |
| ನಿರ್ಮಾಣ 1.0 | ಕೆ.ಎಂ.ಡಿ.ಎಸ್ | ನಾಗರಿಕರು ಕಟ್ಟಡ ಪರವಾನಗಿಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿ ಡಿಜಿಟಲ್ ಸಹಿ ಮಾಡಿದ ಕಟ್ಟಡ ಪರವಾನಗಿಯನ್ನು ನಾಗರೀಕರು ಆನ್‌ಲೈನ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ ಹಾಗೂ ನಾಗರಿಕರು ಅರ್ಜಿಯ ಸ್ಥಿತಿಯನ್ನು ಪರಿಶೀಲಿಸಬಹುದಾಗಿದೆ. |
| ಕೆಎಂಡಿಎಸ್ ರಿಕ್ವೆಸ್ಟ್ ಟ್ರ್ಯಾಕಿಂಗ್ ಸಿಸ್ಟಮ್ | ಕೆ.ಎಂ.ಡಿ.ಎಸ್ | ನಗರ ಸ್ಥಳೀಯ ಸಂಸ್ಥೆಗಳಲ್ಲಿ KMDS ತಂತ್ರಾಂಶಗಳಿಗೆ ಸಂಬಂಧಿಸಿದ ನಿರ್ವಹಣೆ ವಿನಂತಿಗಳನ್ನು ಸಲ್ಲಿಸಬಹುದು, KMDS ತಂಡವು ನಿರ್ವಹಣಾ ವಿನಂತಿಗಳನ್ನು ಪರಿಶೀಲಿಸುತ್ತದೆ, ನಿಯೋಜಿಸುತ್ತದೆ ಮತ್ತು ಪರಿಹರಿಸುತ್ತದೆ. ULB ಬಳಕೆದಾರರು ಸಲ್ಲಿಸಿದ ವಿನಂತಿಗಳ ಸ್ಥಿತಿಯನ್ನು ಪರಿಶೀಲಿಸಬಹುದು. |
| ನಿರ್ವಹಣೆ ವ್ಯವಸ್ಥೆ | ಕೆ.ಎಂ.ಡಿ.ಎಸ್ | ಸದರಿ ತಂತ್ರಾಂಶವನ್ನು ಹಲವು ತಂತ್ರಾಂಶಗಳ User Credentials ಅನ್ನು ನಿರ್ವಹಿಸಲು ಬಳಕೆ ಮಾಡಲಾಗುತ್ತಿದೆ. |
| ಪೌರಾಡಳಿತಕ್ಕೆ ಸಂಬಂಧಿಸಿದ ಸರ್ಕಾರದ ಆದೇಶಗಳು ಮತ್ತು ಸುತ್ತೋಲೆಗಳ ತಂತ್ರಾಂಶ | ಕೆ.ಎಂ.ಡಿ.ಎಸ್ | ಸದರಿ ತಂತ್ರಾಂಶದಲ್ಲಿ ಅಗತ್ಯವಿರುವ ಪೌರಾಡಳಿತಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳನ್ನು ಅಳವಡಿಸಲಾಗಿದ್ದು, search option ಮುಖಾಂತರ ಸಂಬಂಧಿಸಿದ ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. |

ಉಪ ನಿರ್ದೇಶಕರು
ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ
ಬೆಂಗಳೂರು.

Scanned by CamScanner